Reg. No. : ....................................

Name : .......................................

**SY 16**

**MARCH 2019**

Time : 2 ½ Hours
Cool-off time : 15 Minutes

**Part – III**

## KANNADA (Optional)

Maximum : 80 Scores

***General Instructions to Candidates :***

- There is a 'Cool-off time' of 15 minutes in addition to the writing time.
- Use the 'Cool-off time' to get familiar with questions and to plan your answers.
- Read questions carefully before answering.
- Read the instructions carefully.

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಪರೀಕ್ಷೆ ಬರೆಯಲು ಬೇಕಾದ ಸಮಯಕ್ಕೆ ಹೊರತಾಗಿ **15** ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ಕೊಡಲಾಗಿದೆ.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ನಿಮ್ಮ ಉತ್ತರಗಳ ಯೋಜನೆಗೆ ಬಳಸಿ.
- ಉತ್ತರಗಳನ್ನು ಬರೆಯುವುದಕ್ಕೆ ಮುಂಚಿತವಾಗಿ ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. ಕೆಳಗೆ ಕೊಟ್ಟಿರುವವುಗಳಲ್ಲಿ ಸಾಂಗತ್ಯ ಪ್ರಕಾರಕ್ಕೆ ಸೇರಿದ ಕೃತಿ ಯಾವುದು ?
   (ವಿಕ್ರಮಾರ್ಜುನ ವಿಜಯ, ಗಿರಿಜಾ ಕಲ್ಯಾಣ, ಭರತೇಶ ವೈಭವ, ಜೈಮಿನಿ ಭಾರತ)

2. 'ನಿನ್ನ ಮಾತು ಕಾಸಿದ ಸಾಸಿವೆ ಎಣ್ಣೆ ಕಿವಿಯಲ್ಲಿ ಸುರಿದ ಹಾಗೆ ಆಯ್ತು' ಇದು ಯಾರು ಹೇಳಿದ ಮಾತು ?
   (ಕೈಕೇಯಿ, ಭರತ, ಮಂಥರೆ, ದಶರಥ)

3. 'ಕಾಡಿಗೆ ಹೊದ್ದಿಸಿದ ಮಂಜಿನ ಪರದೆ' ಪಾಠಭಾಗವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?
   (ನೀಲಾಚಲಗಳ ನಾಡಿನಲ್ಲಿ, ಕುಲುಕಣಿವೆಯಲ್ಲಿ, ಕಾಡು ಕಣಿವೆಯ ಹಾಡು, ಕರೆಯಿತೋ ಕಡಲತೀರ)

4. ಕನ್ನಡದ ಮೊದಲ ಸಾಮಾಜಿಕ ನಾಟಕ ಯಾವುದು ?
   (ಕತ್ತಲೆ – ಬೆಳಕು, ಟೊಳ್ಳುಗಟ್ಟಿ, ಏನಬೇಡಲಿ ನಿನ್ನ ಬಳಿಗೆ ಬಂದು, ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ)

(5 ರಿಂದ 12 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.)

5. 'ಹೊಳೆವು ತಿರಲೊಳಗೆ' ಪದ ವಿಂಗಡಿಸಿ ಬರೆಯಿರಿ. **(1)**

6. ಅರಮನೆ – ಇದರ ವಿಗ್ರಹ ವಾಕ್ಯವನ್ನು ಬರೆದು ಸಮಾಸವನ್ನು ಹೆಸರಿಸಿರಿ. **(1)**

7. ಲಲಾಟ, ಸಾಯಕ – ಈ ಪದಗಳ ಅರ್ಥವನ್ನು ಬರೆಯಿರಿ. **(1)**

8. 'ಗಂಧೋದಕ' – ಸಂಧಿ ವಿಂಗಡಿಸಿ ಹೆಸರಿಸಿರಿ. **(1)**

9. ಅಡಿಗೆರೆಯೆಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ. **(2)**

ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಯ ಸಾಧನೆಯನ್ನು ಕಂಡು ಅಧ್ಯಾಪಕರು ಹೆಮ್ಮೆಯಿಂದ ತಲೆದೂಗಿದರು.

10. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಶಿಷ್ಟಕನ್ನಡಕ್ಕೆ ಪರಿವರ್ತಿಸಿರಿ. **(3)**

ಇವತ್ತು ಯಾರು ಯುವರಾಜ ಆಕಾರೆ ಅವರಾ
ನಾಳೆ ಮಾರಾಜ ಆಕಾರು ! ಇವತ್ತಿಲ್ಲ ಅಂದರ ನಿನ್ನ
ಮಗಂಗ ಯಾವತ್ತೂ ಇಲ್ಲ ತಿಳ್ ಕೋ, ಅವ
ಊರಲ್ಲೇ ಇಲ್ಲದ ಕಾಲಕ್ಕೆ ಗುಟ್ಟುಗುಟ್ಟಾಗಿ ಯಾಕ
ಈ ಪಟ್ಟದ ಏರ್ಪಾಡು ?

11. ಕೆಳಗೆ ಕೊಟ್ಟಿರುವ ಮಿಶ್ರವಾಕ್ಯವನ್ನು ಸರಳ ವಾಕ್ಯಗಳಾಗಿ ಬರೆಯಿರಿ. **(3)**

ನಾವಿದ್ದ ಎತ್ತರದಿಂದ ನೋಡಿದರೆ ಮೋಡಗಳು ನಮ್ಮ ನೇರಕ್ಕೆ ಕಾಣಿಸುತ್ತಿತ್ತಲ್ಲದೆ ಕೆಲವು ಕಣಿವೆಗಳಲ್ಲಿ ಮೋಡಗಳು ನಮಗಿಂತ ಕೆಳಗಿರುವಂತೆಯೂ ತೋರುತ್ತಿದ್ದು ಮೋಡಗಳನ್ನು ನೋಡಲು ತಲೆಯೆತ್ತ ಬೇಕಾಗಿರಲಿಲ್ಲ.

12. ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳಲ್ಲಿ ಬಳಕೆಯಾದ ಅಲಂಕಾರವನ್ನು ಗುರುತಿಸಿ ಲಕ್ಷಣವನ್ನು ಬರೆಯಿರಿ. **(3)**

ಗರುಡಮಂತ್ರಕೆ ವಿಷವಿಳಿವಂತೆ ಭರತ ಭೂ
ವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ್ದ ಕೋಪ ಪೈ
ಸರಿಸಿತು ಹೃದಯ ತಂಪಾಯ್ತು

**(13 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಪ್ರಶ್ನೆಗಳಿಗೆ ಉತ್ತರಿಸಿರಿ.) (5 × 4 = 20)**

13. ಪ್ರಾಚೀನ ತುಳು ಸಾಹಿತ್ಯದ ವಿಶೇಷತೆಯನ್ನು ತಿಳಿಸುವ ಟಿಪ್ಪಣಿಯೊಂದನ್ನು ಬರೆಯಿರಿ.

14. ಕೆಳಗೆ ಕೊಡಲಾದ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಜಿಸಿ ಛಂದಸ್ಸನ್ನು ಹೆಸರಿಸಿರಿ.

    ಮುಳಿದು ಶಿಶುಪಾಲನಾ ಸಭೆ
    ಯೊಳಗೆ ಮಹಾಪ್ರಳಯ ಜಳಧಿನಾದದಿನಿರದು

15. ಪ್ರೇಕ್ಷಣೀಯ ಸ್ಥಳವೊಂದಕ್ಕೆ ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ವಿವರಿಸಿ ಕಿರುಲೇಖನವೊಂದನ್ನು ಬರೆಯಿರಿ.

16. ಅನುಪಮಾ ನಿರಂಜನರ ಆತ್ಮಕಥೆಯ ಭಾಗವೊಂದನ್ನು ಕೆಳಗೆ ಕೊಡಲಾಗಿದೆ. ಅದನ್ನು ಜೀವನ ಚರಿತ್ರೆಯಾಗಿ ಪರಿವರ್ತಿಸಿರಿ.

    ನನ್ನ ಬರವಣಿಗೆ 1975 ರ ಹೊತ್ತಿಗೆ ಹೊಸ ತಿರುವು ಪಡೆಯಿತು. ನಾನು ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಲು ಶುರು ಮಾಡಿದೆ, ಬರವಣಿಗೆಯ ಗುಣಮಟ್ಟ ವೃದ್ಧಿಸಲು ಹೊರಗಿನವರು ಸಹಾಯ ಮಾಡಲು ಸಾಧ್ಯವಿಲ್ಲ. ನಾನು ನನ್ನ ಪರಿಶ್ರಮದಿಂದ ಅದನ್ನು ಸಾಧಿಸಬೇಕು ಎಂಬುದನ್ನು ಕಂಡುಕೊಂಡೆ. ಒಂದು ರೀತಿಯ ಆತ್ಮವಿಶ್ವಾಸ ನನ್ನಲ್ಲಿ ತುಂಬಿ ಬಂತು. ನನ್ನ ಅಧ್ಯಯನ ತುಂಬಾ ವ್ಯಾಪಕವಾಯಿತು.

17. 'ಶ್ರೀಮತಿ ಸ್ವಯಂವರ' ಪಾಠಭಾಗದಲ್ಲಿ ಬಂದಿರುವ ಈ ಕೆಳಗಿನ ಮಾತನ್ನು ಸಂದರ್ಭಸಹಿತ ವಿವರಿಸಿರಿ.

    ದೈವ ಸಂಕಲ್ಪವನಾರ್ ಮೀರ್ವರ್ ?

18. 'ಧರೆ ಮೆಚ್ಚದಣ್ಣ ಸೋದರರ ಕಾಳಗಕೆ' ಕಾವ್ಯಭಾಗದ ಪದ್ಯವೊಂದನ್ನು ಕೆಳಗೆ ಕೊಡಲಾಗಿದೆ. ಅದರ ಆಶಯವನ್ನು ಬರೆಯಿರಿ.

    ನನ್ನಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು
    ನಿನ್ನಗೆಲ್ದೆನಗೊಂದು ಜಸವೆ
    ಪನ್ನಗನರಸುಲೋಕದುತ್ತಮರು ಛಿ
    ಯೆನ್ನರೆ ಯೋಚಿಸಿ ನೋಡು

**(19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಪ್ರಶ್ನೆಗಳಿಗೆ 1 ಪುಟಕ್ಕೆ ಮೀರದಂತೆ ಉತ್ತರಿಸಿರಿ.) (5 × 5 = 25)**

19. ಕನ್ನಡ ಭಾಷಾ ಪ್ರಭೇದಗಳ ವಿಶೇಷತೆಯ ಕುರಿತು ಲೇಖನವೊಂದನ್ನು ಸಿದ್ಧಪಡಿಸಿರಿ.

20. ಬದುಕಿನ ನೋವಿನ ಕ್ಷಣಗಳನ್ನು ಮಾಸಿ ಜೀವಕ್ಕೆ ಚೈತನ್ಯ ತುಂಬಲು ಬರಹದಿಂದ ಸಾಧ್ಯವಾದೀತೆ ? ಅನುಪಮಾ ನಿರಂಜನರ ಅನುಭವಗಳ ಹಿನ್ನೆಲೆಯಲ್ಲಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ.

21. ಯುದ್ಧದಿಂದ ಹಿಂದೆ ಸರಿಯುವಂತೆ ಬಾಹುಬಲಿಯ ಮನವೊಲಿಸಲು ಭರತನು ಆಡಿದ ಉಪದೇಶದ ಮಾತುಗಳು ಯಾವುವು ? ವಿವರಿಸಿ ಬರೆಯಿರಿ.

22. 'ಇಡ್ಲಿ' ಪದದ ಉತ್ಪತ್ತಿಯ ಕುರಿತು ಸೇಡಿಯಾಪು ಕೃಷ್ಣಭಟ್ಟರು ಸ್ವಾರಸ್ಯಕರವಾಗಿ ಹೇಳಿರುವ ವಿಚಾರಗಳನ್ನು ಸಂಗ್ರಹವಾಗಿ ಬರೆಯಿರಿ.

23. ದುಷ್ಟಬುದ್ಧಿಯು ಹೂಡಿದ ಸಂಚಿನಿಂದ ಚಂದ್ರಹಾಸನು ಪಾರಾದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

24. 'ಕನ್ನಡದಲ್ಲಿ ನಾಟಕ ಸಾಹಿತ್ಯ' ಪಾಠಭಾಗದಲ್ಲಿ ಬಂದಿರುವ ಮಾಹಿತಿಗಳನ್ನು ಆಧಾರವಾಗಿರಿಸಿ 'ಕನ್ನಡ ನಾಟಕದ ಉಗಮ ಮತ್ತು ವಿಕಾಸ' ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಬರೆಯಿರಿ.

25. ನಾರದ ಮತ್ತು ಪರ್ವತರು ಒಬ್ಬರು ಮತ್ತೊಬ್ಬರನ್ನು ವಂಚಿಸಲು ಹೋಗಿ ಕೊನೆಗೆ ತಾವೇ ಮೋಸಹೊದ ಸನ್ನಿವೇಶ 'ಶ್ರೀಮತಿ ಸ್ವಯಂವರ' ಕಥೆಯಲ್ಲಿ ಹೇಗೆ ಮೂಡಿ ಬಂದಿದೆ ವಿವರಿಸಿರಿ.

**(26 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ 1½ (ಒಂದೂವರೆ) ಪುಟಕ್ಕೆ ಮೀರದಂತೆ ಉತ್ತರಿಸಿರಿ.)** **(2 × 8 = 16)**

26. ಯುವರಾಜ ಪಟ್ಟ ಭರತನಿಗೇ ಸಿಗಬೇಕೆಂದು ಕೈಕೆಯಿಯ ಮನವೊಲಿಸುವಲ್ಲಿ ಮಂಥರೆಯು ಮಾಡಿದ ಪ್ರಯತ್ನಗಳನ್ನು ನಾಟಕದ ಹಿನ್ನೆಲೆಯಲ್ಲಿ ವಿಶದ ಪಡಿಸಿರಿ.

27. ಇಳೆಯಾಂಡ ಗುಡಿಮಾರನ ಭಕ್ತಿಯನ್ನು ಶಿವನು ಪರೀಕ್ಷಿಸಿದ ಬಗೆ ಯಾವುದು ? ನಿಮ್ಮ ಮಾತುಗಳಲ್ಲಿ ಬರೆಯಿರಿ.

28. ಅಹಂಕಾರ ಮತ್ತು ಮಾತ್ಸರ್ಯಗಳು ವ್ಯಕ್ತಿಯ ವಿನಾಶಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ಶಿಶುಪಾಲನ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಸಮರ್ಥಿಸಿ ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ.